ಶ್ರೀ ಆರ್. ನಾರಾಯಣಪ್ಪ.—೧೯೮೮-೮೯ರಲ್ಲಿ ೮೧ರ ಒಂದು ಪಿಕಪ್ ಕೆಲಸವನ್ನು ಪ್ರಾರಂಭಿಸಲಾಗಿದ್ದು ಅದು ಇಲ್ಲಿಯವರೆಗೆ ಆಗಿಲ್ಲ. ಅದಷ್ಟು ಬೇಗನೆ ಮುಗಿಸಿ ಕೊಡಲಿಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಈ ಸದನದಲ್ಲಿಯೇ ಹಿಂದೆ ಇದಕ್ಕೆ ಉತ್ತರವನ್ನು ಕೊಟ್ಟಿದ್ದೇವೆ. ೧೯೭೨ರಿಂದಲೇ ಈ ಯೋಜನೆಗಳ ಕೆಲಸ ಆರಂಭವಾಗಿ ಅರ್ಧಂಬರ್ಧವಾಗಿತಕ್ಕಂಥದ್ದು ನನ್ನ ಗಮನಕ್ಕೆ ಬಂದಿರುತ್ತದೆ. ಇಷ್ಟರವರೆಗೂ ಹಣದ ಕೊರತೆ ಇತ್ತು ಆದ್ದರಿಂದ ಈ ಎಲ್ಲ ಕೆಲಸಗಳನ್ನು ಕೈಗೊಳ್ಳಲು ಸಾಧ್ಯವಾಗಲಿಲ್ಲ. ನಾವು ಮುಖ್ಯವಾಗಿ ಆದ್ಯತೆ ಕೊಟ್ಟಿರತಕ್ಕಂಥದ್ದು ಎಡನಂಡೆ ನಾಲೆಯ ಬಗ್ಗೆಯಾಗಿರುತ್ತದೆ. ಇದು ಪದೇ ಪದೇ ಒಡೆಯುತ್ತಿದ್ದುದರಿಂದ, ಇದಕ್ಕೆ ಏನಾದರೂ ಖಾಯಂ ವ್ಯವಸ್ಥೆಯನ್ನು ಮಾಡಬೇಕೆಂದು ಹೇಳಿ, ತಾಂತ್ರಿಕ ತಜ್ಞರು ಕೊಟ್ಟಿರತಕ್ಕಂಥ ಸಲಹೆಯ ಆಧಾರದ ಮೇಲೆ ಎರಡು ವರ್ಷಗಳಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ, ಇನ್ನರ್ ಲೈನಿಂಗ್‌ವರ್ಕ್ ಮಾಡಬೇಕಾಗಿರುತ್ತದೆ. ಬ್ರೀಚ್ ಆಗತಕ್ಕಂಥ ರೋಗ ಮೂವತ್ತು ವರ್ಷಗಳಿಂದ ಬಂದಿರತಕ್ಕಂಥದ್ದಾಗಿರುತ್ತದೆ. ಇದನ್ನು ಬಗೆಹರಿಸಲು ಆದ್ಯತೆಯನ್ನು ಕೊಟ್ಟು ಕೆಲಸ ಮಾಡಿಸಲು ಹೆಚ್ಚು ಹಣವನ್ನು ಒದಗಿಸಲು ಪ್ರಯತ್ನಮಾಡುತ್ತೇನೆ.

ಶ್ರೀ ಆರ್. ನಾರಾಯಣಪ್ಪ.—ಇನ್ನರ್ ವರ್ಕ್ ಕೆಲಸ ಆರಂಭಿಸಿದ್ದೇವೆ, ಇದಕ್ಕೆ ೧೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆಂದು ಮಾನ್ಯ ಸಚಿವರು ತಿಳಿಸಿದರು. ಈ ಕೆಲಸ ಮಾಡಿದ್ದು ಒಡೆಯಲಿಕ್ಕೆ ಕಾರಣವೇನು ? ಅದರ ನ್ಯೂನ್ಯತೆಗಳನ್ನು ತಿಳಿಸಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳಿದಂತೆ ದೋಷಪೂರಿತವಾಗಿ ಕೆಲಸ ಮಾಡಿರತಕ್ಕಂಥ ಅಧಿಕಾರಿಗಳು ಇದ್ದರೆ ಅವರನ್ನು ಉಗ್ರವಾಗಿ ಶಿಕ್ಷೆಗೆ ಗುರಿಪಡಿಸಲಾಗುತ್ತದೆ. ಇದಕ್ಕಾಗಿ ತಪಾಸಣೆ ಮಾಡುತ್ತಿದ್ದೇವೆ. ತಾವು ಏನಾದರೂ ಒಂದು ನಿದರ್ಶನವನ್ನು ಖಚಿತ ಪಡಿಸುವುದಾದರೆ, ಸಂಬಂಧಪಟ್ಟ ಅಧಿಕಾರಿಯಮೇಲೆ ಕ್ರಮ ತೆಗೆದುಕೊಳ್ಳುವುದರಲ್ಲಿ ಹಿಂಜರಿಯುವುದಿಲ್ಲ. ಈಗಾಗಲೇ ೧೯೬೬ರಿಂದ ಪ್ರಾರಂಭವಾಗಿರತಕ್ಕಂಥ ಒಂದೊಂದು ಪಿಕ್‌ಅಪ್‌ಗೂ ಒಂದು ಲಕ್ಷ ರೂಪಾಯಿಗಳಿಂದ ಮೂರು ಲಕ್ಷ ರೂಪಾಯಿಗಳ ವರೆಗೂ ಹಣವನ್ನು ಖರ್ಚುಮಾಡಿರುತ್ತೇವೆ. ಇಷ್ಟು ಹಣವನ್ನು ಖರ್ಚು ಮಾಡಿ ಅರ್ಧ ನಿಂತಿರತಕ್ಕಂಥ ಕೆಲಸಗಳಿಂದಾಗಿ ರೈತರಿಗೆ ಯಾವ ಅನುಕೂಲವೂ ಆಗಿಲ್ಲವೆಂಬುದನ್ನು ಸರ್ಕಾರ ಮನಗಂಡಿರುತ್ತದೆ. ಅರ್ಧ ನಿಂತಿರುವ ಕೆಲಸಗಳನ್ನು ಕಾರ್ಯರೂಪಕ್ಕೆ ತಂದು ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇವೆಂದು ಹೇಳುತ್ತೇನೆ.

ಶ್ರೀ ಆರ್. ನಾರಾಯಣಪ್ಪ.—ಅರ್ಧಂಬರ್ಧ ನಿಂತಿರುವ ಕೆಲಸಗಳನ್ನು ಪೂರ್ತಿಗೊಳಿಸುವ ಸಲುವಾಗಿ ಸರ್ಕಾರದವರು ಹಣವನ್ನು ಒದಗಿಸಿ ಆದಷ್ಟು ಜಾಗ್ರತೆಯಾಗಿ ಮುಗಿಸುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ತಾವು ಹೇಳಿದಂತೆ ಸರ್ಕಾರಕ್ಕೂ ತುಂಬಾ ಸಹಾನುಭೂತಿ ಇರುತ್ತದೆ. ಆದರೆ ಇನ್ನರ್‌ಲೈನ್ ಕೆಲಸ ಮುಗಿಸಬೇಕಾಗಿರುತ್ತದೆ. ಕಾಲುವೆಗಳಲ್ಲಿ ಬ್ರೀಚ್ ಆಗುತ್ತಿರುವುದರಿಂದ ರಾಯಚೂರು ಜಿಲ್ಲೆಗೆ ಕುಡಿಯುವ ನೀರಿಗೆ ತೊಂದರೆಯಾಗುತ್ತದೆ. ಇದರ ಬಗ್ಗೆಯೂ ಗಮನಿಸಬೇಕಾಗಿದೆ ಒಟ್ಟಿನಲ್ಲಿ ಇನ್ನರ್‌ವರ್ಕ್ ಎಕ್ಸಪರ್ಟ್ ಮಾಡಿ, ಅದಾದಮೇಲೆ ನೆನೆಗುದಿಯಲ್ಲಿ ಬಿದ್ದಿರತಕ್ಕಂಥ ಕೆಲಸಗಳಿಗೆ ಹಣವನ್ನು ಒದಗಿಸಲು ಸರ್ಕಾರಕ್ಕೆ ಆದೇಶ ಕೊಡುತ್ತೇನೆ.

ಕುಮದ್ವತೀ ಸೇತುವೆಯ ನಿರ್ಮಾಣದ ಬಗ್ಗೆ

೨೧೭ (೨೬೧) ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಶಿಕಾರಿಪುರ ತಾಲ್ಲೂಕು ಕುಮದ್ವತೀ ನದಿಗೆ ಕಟ್ಟುತ್ತಿರುವ ಸೇತುವೆ ಕೆಲಸವನ್ನು ಯಾವ ವರ್ಷ ಮುಗಿಸಬೇಕಾಗಿತ್ತು ?

ಆ) ಸದರಿ ಕೆಲಸದಲ್ಲಿ ವಿಳಂಬವುಂಟಾಗಿದ್ದಲ್ಲಿ ಆ ಬಗ್ಗೆ ಕಂಟ್ರಾಕ್ಟರ್ ವಿರುದ್ಧ ಕೈಗೊಳ್ಳಲಾದ ಕ್ರಮವೇನು ?

ಇ) ಹಿಂದೆ ಹಾಲಿ ಇದ್ದ ಸೇತುವೆ ಅಪಾಯ ಸ್ಥಿತಿಯಲ್ಲಿದ್ದು ಆಗಾಗ್ಗೆ ಬಸ್ ಲಾರಿ ಇತ್ಯಾದಿ ಬಿದ್ದು ಪ್ರಾಣಾಪಾಯವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ರಾಷ್ಟ್ರೀಯ ಹೆದ್ದಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಅಂಗೀಕರಿಸಿದ ಟೆಂಡರು ಪ್ರಕಾರ ದಿನಾಂಕ, ೨೮–೨–೧೯೮೫ರ ಒಳಗೆ ಸಂಪೂರ್ಣವಾಗಬೇಕಿತ್ತು.

ಆ) ಗುತ್ತಿಗೆದಾರ ಶ್ರೀ ಪಿ. ರಾಮಪ್ಪ ಅವರ ಗುತ್ತಿಗೆಯನ್ನು ಚಿತ್ರದುರ್ಗ ರಾಷ್ಟ್ರೀಯ ಹೆದ್ದಾರಿ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ದಿನಾಂಕ, ೮–೫–೧೯೮೫ರಲ್ಲಿ ಗುತ್ತಿಗೆದಾರರು ನಿರ್ದಿಷ್ಟ ಪಡಿಸಿದ ಕಾಲದಲ್ಲಿ ಸಾಕಷ್ಟು ಪ್ರಗತಿ ತೋರಿಸಲಿಲ್ಲವೆಂಬ ಕಾರಣದಿಂದ ರದ್ದು ಪಡಿಸಿ ಉಳಿಕೆ ಕೆಲಸವನ್ನು ಸದರಿ ಗುತ್ತಿಗೆದಾರರ ಹೊಣೆಗಾರಿಕೆ ಮತ್ತು ಖರ್ಚಿನಲ್ಲಿ ನಿರ್ವಹಿಸಲು ಪ್ರಸ್ತಾಪಿಸಲಾಗಿದೆ.

ಇ) ಹೌದು.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, (ಅ) ಗೆ ಉತ್ತರವಾಗಿ ಈ ಕೆಲಸ ೨೨.೪.೮೪ರಲ್ಲೇ ವರ್ಕ್ ಆರ್ಡರ್ ಕೊಟ್ಟ ತಕ್ಷಣವೇ ಕೆಲಸವನ್ನು ಕೈಗೆ ತೆಗೆದುಕೊಳ್ಳಲಾಯಿತು. ಈ ಕೆಲಸ ೨೮.೨.೮೫ರಲ್ಲೇ ಮುಗಿಯಬೇಕಾಗಿತ್ತು. ಆದರೆ ಕಂಟ್ರಾಕ್ಟರ್ ದೋಷದಿಂದಾಗಿ ಕೆಲಸ ಸಕಾಲದಲ್ಲಿ ಆಗಲಿಲ್ಲ. ಕಂಟ್ರಾಕ್ಟರ್ ಸುಮಾರು ೧.೧೮,೦೦೦ ರೂಪಾಯಿಗಳಷ್ಟು ಕೆಲಸ ಮಾಡಿದ್ದಾರೆ. ಕಂಟ್ರಾಕ್ಟರ್ ಸಕಾಲದಲ್ಲಿ ಕೆಲಸ ಮುಗಿಸಲಿಲ್ಲವಾದ ಕಾರಣ ಸರ್ಕಾರ ಏನೆಲ್ಲ ಶಿಕ್ಷೆಯನ್ನು ವಿಧಿಸಬೇಕೋ ಅದನ್ನೆಲ್ಲ ವಿಧಿಸಿ ಕ್ರಮ ತೆಗೆದುಕೊಳ್ಳಲಾಗಿದೆ. ಸುಮಾರು ೭೩ ಸಾವಿರ ರೂಪಾಯಿಗಳ ದಂಡವನ್ನೂ ಸಹ ಹಾಕಿದ್ದೇವೆ. ಅವರ ಇ.ಎಂ.ಡಿ. ಫೋರ್‌ಫೀಟ್ ಸಹ ಮಾಡಿದ್ದೇವೆ. ಮತ್ತೆ ಇಲಾಖೆಯವರೇ ಈ ಕೆಲಸವನ್ನು ತೆಗೆದುಕೊಂಡು ಜರೂರು ಮಾಡಿ ಮುಗಿಸಬೇಕೆಂದೂ ಕೂಡ ಸೂಚನೆ ಕೊಟ್ಟಿದ್ದೇನೆ. ನಾನು ಹಿಂದೆ ಲೋಕೋಪಯೋಗಿ ಮಂತ್ರಿಯಾಗಿ ಕೊಟ್ಟಿರತಕ್ಕಂಥ ಕಾಲದಲ್ಲಿ ಅಷ್ಟು ಹೊತ್ತಿಗೆ ಅದು ಟೆಂಡರ್ ನೋಟಿಫಿಕೇಷನ್ ಆಗಿತ್ತು. ಆದರೆ ಬ್ಯಾಲೆನ್ಸ್ ಆಫ್ ವರ್ಕ್ ಏನು ಇರುತ್ತದೆಯೋ ಅದನ್ನು ಕೂಡ ಕೈ ಬಿಡದೆ, ಇಲಾಖೆಯವರೇ ಮಾಡಬೇಕೆಂದು ಸೂಚನೆ ಕೊಟ್ಟಿರುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಒಂದು ಪರಿಪಾಠವಾಗಿರುತ್ತದೆ. ಪಿ.ಡಬ್ಲ್ಯೂ.ಡಿ. ಇಲಾಖೆಯವರಿಂದ ಯಾವುದೇ ಒಂದು ಕೆಲಸವಾಗಬೇಕಾಗಿದ್ದರೆ ಶಾಸಕರಾಗಿರತಕ್ಕಂಥ ನಾವು ಪ್ರಶ್ನೆಯನ್ನು ಕೇಳಿದ ಮೇಲೆ, ಅಧಿಕಾರಿಗಳು ಕ್ರಮ ತೆಗೆದುಕೊಳ್ಳತಕ್ಕಂಥ ಪರಿಪಾಠ ಇರುತ್ತದೆ. ಹಿಂದಿನ ವರ್ಷವೂ ಕೂಡ ತಮ್ಮ ಮುಖಾಂತರ ತಕ್ಷಣ ಕೆಲಸ ಮುಗಿಸಿಕೊಡಬೇಕೆಂದು ಹೇಳಿಕೊಂಡಿದ್ದಕ್ಕೆ ತಾವು ಕೂಡ ಒಪ್ಪಿಕೊಂಡಿದ್ದಿರಿ ಆ ಬ್ರಿಡ್ಜ್‌ನ ಆ ಕಡೆ ಈ ಕಡೆ ಲಾರಿಗಳು ಬಿದ್ದು ಪ್ರಾಣಾಪಾಯವಾಗುತ್ತಿದೆ. ಈ ಬ್ರಿಡ್ಜ್ ಕೆಲಸ ೨೮.೨.೮೫ಕ್ಕೆ ಪೂರ್ಣವಾಗಬೇಕಾಗಿತ್ತು. ಕಂಟ್ರಾಕ್ಟರ್ ಸರಿಯಿಲ್ಲದಿದ್ದರೆ ಬೇರೆಯವರಿಗಾದರೂ ಎಂಟ್ರಸ್ಟ್ ಮಾಡಿ ಈ ವರ್ಷವಾದರೂ ಮುಗಿಸಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಏತಕ್ಕೆಂದರೆ ಅದು ತುಂಬಾ ಅಪಾಯಸ್ಥಿತಿಯಲ್ಲಿರುತ್ತದೆ. ಕೊನೆಯ ಪಕ್ಷ ಈಗ ಇರತಕ್ಕಂಥ ಬ್ರಿಡ್ಜ್‌ನ್ನಾದರೂ ಟೆಂಪರರಿಯಾಗಿ ರಿಪೇರಿ ಮಾಡಿಸಿ ಕೊಡಿ. ಯಾವ ನಿಮಿಷದಲ್ಲಿ ಏನಾಗುತ್ತದೋ ಹೇಳುವುದಕ್ಕೆ ಬರುವುದಿಲ್ಲ. ಆದ್ದರಿಂದ ಯಾವಾಗ ಮುಗಿಸುತ್ತೀರಿ ಎಂಬುದಕ್ಕೆ ನಿರ್ದಿಷ್ಟವಾಗಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮನುಷ್ಯ ಪ್ರಯತ್ನದಲ್ಲಿ ಎಷ್ಟು ವೇಗದಿಂದ ಕೆಲಸ ಮಾಡಲಿಕ್ಕೆ ಸಾಧ್ಯವೋ ಅಷ್ಟು ವೇಗದಲ್ಲಿ ಕೆಲಸ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಬಿ ಎಸ್. ಯಡಿಯೂರಪ್ಪ.—ಈಗಿರತಕ್ಕಥ ಹಳೇ ಬ್ರಿಡ್ಜ್ ಏನು ಇದೆ ಆದಕ್ಕೆ ಆಕಡೆ ಈಕಡೆ ಇರತಕ್ಕಂಥ ಗೋಡೆಗಳನ್ನು ದುರಸ್ತಿಪಡಿಸಿಕೊಡಬೇಕೆಂದು ಅಧಿಕಾರಿಗಳಲ್ಲಿ ವಿನಂತಿ ಮಾಡಿಕೊಂಡಿದ್ದೆನು ನೇರವಾಗಿ ಮಾತುಕತೆಯನ್ನೂ ಕೂಡ ಮಾಡಿದ್ದೆನು.

ಶ್ರೀ ಎಚ್. ಡಿ. ದೇವೇಗೌಡ.—ಡೀವಿವಿಷನ್ ರೋಡ್ ಬಗ್ಗೆ ಮಾನ್ಯ ಸದಸ್ಯರು ಹೇಳಿರುತ್ತಾರೆ. ಅದರ ಬಗ್ಗೆ ಆಲೋಚನೆ ಮಾಡುತ್ತೇನೆ. ಏತಕ್ಕೆಂದರೆ ಅದಕ್ಕೆ ಎಷ್ಟು ಹಣ ಖರ್ಚಾಗುತ್ತದೆ ಎನ್ನುವುದು ಗೊತ್ತಿಲ್ಲ. ಏತಕ್ಕೆಂದರೆ ಹೌಸ್‌ನಲ್ಲಿ ಹೇಳಿದಮೇಲೆ, ಹೌಸ್‌ನಲ್ಲಿ ಏನಾದರೂ ಕಮಿಟ್‌ಮೆಂಟ್ ಮಾಡಿಕೊಂಡರೆ ಅದನ್ನು ಕೂಡಲೇ ಇಂಪ್ಲಿಮೆಂಟ್ ಮಾಡಬೇಕಾಗುತ್ತದೆ, ಮಾನ್ಯ

ಸದಸ್ಯರು ಹೇಳತಕ್ಕಂಥದ್ದು ಸತ್ಯ ಇರತ್ತದೆ. ಜನರಿಗೆ ಕಷ್ಟ ಇರುತ್ತದೆ, ಆದ್ದರಿಂದ ಈ ಕೆಲಸವನ್ನು ಶರವೇಗದಲ್ಲಿ ಮುಗಿಸಬೇಕೆಂದು ಸೂಚನೆ ಕೊಟ್ಟಿದ್ದೇನೆ. ಶರವೇಗದಲ್ಲಿ ಮಾಡಲು ಪ್ರಯತ್ನ ಮಾಡುತ್ತೇನೆಂದು ಹೇಳುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಸರ್ವ ಸಮಾಜದಲ್ಲಿರುವ ದೇವದಾಸಿಗಳ ಮಾಹಿತಿ ಬಗ್ಗೆ

೨೧೭ (೩೬೧) ಶ್ರೀ ಮಲ್ಲಾರಗೌಡ ಎಸ್. ಪಾಟೀಲ್ (ಸಂಕೇಶ್ವರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿಯ ದೇವದಾಸಿಯರ ಒಟ್ಟು ಸಂಖ್ಯೆ ಎಷ್ಟು ? (ಜಿಲ್ಲಾವಾರು)

ಆ) ದೇವದಾಸಿಯರ ಪುನರ್ವಸತಿಗಾಗಿ ಸರ್ಕಾರದವರು ರೂಪಿಸಿರುವ ಯೋಜನೆಗಳಾವುವು?

ಇ) ದೇವದಾಸಿಯರ ವಿಷಯದಲ್ಲಿ ತಂದ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ ವಿಳಂಬವಾಗಿರುವುದಕ್ಕೆ ಕಾರಣಗಳೇನು ?

ಈ) ೫೦ ವರ್ಷಗಳಿಗಿಂತ ಹೆಚ್ಚು ವಯಸ್ಸಾದ ದೇವದಾಸಿಯರಿಗೆ ಮಾಶಾಸನ ಕೊಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಒಟ್ಟು ೪೯೨೭

೧)	ಬೆಳಗಾಂ	—	೨೮೫೨
೨)	ಬಿಜಾಪುರ	—	೧೦೨೫
೩)	ಬಳ್ಳಾರಿ	—	೬೫೨
೪)	ಧಾರವಾಡ	—	೨೫೨
೫)	ರಾಯಚೂರು	—	೬೪
೬)	ಗುಲ್ಬರ್ಗ	—	೫೨
೭)	ಬೀದರ್	—	೩೦

ಆ) ೧) ಇಲಾಖೆಯಿಂದ ದೇವದಾಸಿಯರನ್ನು ಮದುವೆಯಾದಂತಹವರಿಗೆ ೩೦೦೦-೦೦ ರೂ. ಧನಸಹಾಯ ಕೊಡಲಾಗುತ್ತದೆ.

೨) ಸೌದತ್ತಿ ತಾಲ್ಲೂಕ್ ಬೆಳಗಾಂ ಜಿಲ್ಲೆಯಲ್ಲಿ ಹೆಣ್ಣುಮಕ್ಕಳ ಪ್ರಮಾಣಿಕ ಶಾಲೆ ತೆರೆಯಲಾಗಿದೆ. ಈ ಮಕ್ಕಳಿಗೆ ವಸತಿ, ವಿದ್ಯಾಭ್ಯಾಸ ಮತ್ತು ವೃತ್ತಿಪರ ಶಿಕ್ಷಣ ಕೊಡಲಾಗುತ್ತಿದೆ.

೩) ಅಥಣಿ ತಾಲ್ಲೂಕು, ಬೆಳಗಾಂ ಜಿಲ್ಲೆಯಲ್ಲಿ ದೇವದಾಸಿ ಮಹಿಳೆಯರಿಗೆ ಹಾಗೂ ರಕ್ಷಣೆ ಮತ್ತು ವಸತಿ ಬೇಕಾದಂತೆ ಮಹಿಳೆಯರಿಗೆ ರಾಜ್ಯಗೃಹ ತೆರೆಯಲಾಗಿದೆ. ಇವರಿಗೆ ವೃತ್ತಿಪರ ತರಬೇತಿ ಕೊಟ್ಟು ಅವರ ಜೀವನೋಪಾಯದ ಅವರು ನೋಡಿಕೊಳ್ಳಲು ಅನುಕೂಲ ಮಾಡಿಕೊಡಲಾಗುತ್ತದೆ.

೪) ಗುರುತಿಸಿದಂತಹ ದೇವದಾಸಿಯರ ಕುಟುಂಬಗಳಿಗೆ ಸರಕಾರದಲ್ಲಿರುವ ಯೋಜನೆಗಳಾದ ಸಮಗ್ರ ಗ್ರಾಮೀಣ ಯೋಜನೆ ಮತ್ತು ಜನತಾ ಮನೆಗಳ ಯೋಜನೆ ಮೂಲಕ ಸಹಾಯ ಮಾಡಲು ಜಿಲ್ಲಾಧಿಕಾರಿಗಳಿಗೆ ಭಿನ್ನವಿಸಿಕೊಳ್ಳಲಾಗಿದೆ.

೫) ದೇವದಾಸಿಯರಿಗೆ ಗೃಹಕಲ್ಯಾಣ ಯೋಜನೆಗಳಲ್ಲಿ ಸಹಾಯ ಮಾಡಲಾಗಿದೆ.

೬) ಈ ಸಮಾಜಿಕ ಪಿಡುಗುಗಳಾದ ದೇವದಾಸಿ ಪದ್ಧತಿ ಮತ್ತು ಇತರ ಪಿಡುಗುಗಳ ನಿರ್ಮೂಲನಕ್ಕೆ ಒಂದು ವಿಶೇಷ ಘಟಕವನ್ನು ಸಮಾಜ ಕಲ್ಯಾಣ ಇಲಾಖೆಯಲ್ಲಿ ತೆರೆಯಲಾಗಿದೆ. ಇದರ ಪುಟ್ಟ ವಿಭಾಗಗಳನ್ನು ಬೆಳಗಾಂ ಮತ್ತು ಬೀದರ್ ಜಿಲ್ಲೆಯಲ್ಲಿ ತೆರೆಯಲಾಗಿದೆ.